# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು (ಆಸ್ತಿಗಳು) ರವರ ಕಛೇರಿ, ಮಹಾನಗರ ಪಾಲಿಕೆ ಕಛೇರಿಗಳು, ಎನ್.ಆರ್.ವೃತ್ತ, ಬೆಂಗಳೂರು.

ಕ್ರ..ಸ:ಎ3(4)ಪಿಆರ್/119/12-13

ದಿನಾಂಕ:01-07-2013

## ಸುತ್ತೋಲೆ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತುಗಳನ್ನು ಕ್ರಯಕ್ಕೆ ಅಥವಾ ಗುತ್ತಿಗೆಗೆ ನೀಡುವ ಬಗ್ಗೆ.

ಉಲ್ಲೇಖ:
1. ಈ ಪ್ರಾಧಿಕಾರದ ಸುತ್ತೋಲೆ ಸಂಖ್ಯೆ: ಎ3(2)/ಪಿಆರ್/67/2002-03, ದಿನಾಂಕ:08-10-2002.
2. ಅ/ಸಿಆರ್/1435/2005-06, ದಿನಾಂಕ:18-07-2005.
3. ಉಪ ಆಯುಕ್ತರು (ಕಂದಾಯ)/ಪಿಆರ್/118/2001-02, ದಿನಾಂಕ: 01-03-2002.
4. ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ:02-06-2003.

****

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ಮತ್ತು (2)ರ ಈ ಕಛೇರಿಯ ಸುತ್ತೋಲೆ ಮತ್ತು ನ್ಯಾಯಾಲಯದ ವಾಜೀದ್ v/s ಕರ್ನಾಟಕ ಸರ್ಕಾರದ ಪ್ರಕರಣದಲ್ಲಿ ದಿನಾಂಕ:16-12-1985 ರಂದು ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಪಾಲಿಕೆಯ ಸ್ವತ್ತನ್ನು ಅದರಲ್ಲಿಯೂ ವಿಶೇಷವಾಗಿ ಪಾದಚಾರಿ ಮಾರ್ಗದಲ್ಲಿ ಪಾದಚಾರಿಗಳ ಚಲನವಲನಕ್ಕೆ ಅಡ್ಡಿಮಾಡುವ ರೀತಿಯಲ್ಲಿ ಯಾವುದೇ ಬೂತ್‌ಗಳನ್ನು ಅಂಗಡಿಗಳ ನಿರ್ಮಾಣಗಳನ್ನು ಮಾಡಬಾರದೆಂದು ಸ್ಪಷ್ಟವಾಗಿ ನಿರ್ದೇಶನವನ್ನು ನೀಡಲಾಗಿರುತ್ತದೆ.

ಉಲ್ಲೇಖ(3)ರ ದಿನಾಂಕ:01-03-2002ರ ಸುತ್ತೋಲೆಯಲ್ಲಿ ಗುತ್ತಿಗೆಯ ಪರಭಾರೆ ಮಾಡುವ ಮಾರ್ಗಸೂಚಿಗಳನ್ವಯ ನಗರದಲ್ಲಿ ಕನ್ಸರ್‌ವೆನ್ಸಿ ಗಲ್ಲಿಗಳನ್ನು ವಾಹನ ನಿಲ್ದಾಣಗಳಾಗಿಯೂ ಮತ್ತು ಅಗತ್ಯವಿರುವ ಕಡೆ ರಸ್ತೆಗಳನ್ನಾಗಿ ಮಾರ್ಪಡಿಸುತ್ತಿರುವ ಕಾರಣ ಹಾಗೂ ಮಳೆ ನೀರಿನ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯಲು ಅನುವು ಮಾಡಿಕೊಡಬೇಕಾಗಿರುವುದರಿಂದ, ಮಳೆ ನೀರಿನ ಚರಂಡಿ ಮೇಲೆ ಗುತ್ತಿಗೆಗೆ ನೀಡುವುದು, ರಸ್ತೆಬದಿ, ಪಾದಚಾರಿ ಮಾರ್ಗ, ಉದ್ಯಾನವನ ಮತ್ತು ಆಟದ ಮೈದಾನಗಳಲ್ಲಿ ಗುತ್ತಿಗೆಗೆ ನೀಡುವುದು ಸಮಂಜಸವಾಗಲಾರದೆಂದು ಸುತ್ತೋಲೆಯಲ್ಲಿ ತಿಳಿಯಪಡಿಸಿದೆ.

ಮೇಲೆ ವಿವರಿಸಿದ ಪಾದಚಾರಿ ರಸ್ತೆ, ಉದ್ಯಾನವನ ಮತ್ತು ಆಟದ ಮೈದಾನಗಳನ್ನು ಹೊರತುಪಡಿಸಿ ಇನ್ನಿತರೇ ಪಾಲಿಕೆಯ ಆಸ್ತಿಗಳನ್ನು ಪಾಲಿಕೆಯ ಉದ್ದೇಶಕ್ಕೆ ಅಗತ್ಯವಿದೆಯೇ ಎಂಬುದರ ಬಗ್ಗೆ ಕಂದಾಯ ಅಧಿಕಾರಿಗಳು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಂದ ಆರೋಗ್ಯ/ತೋಟಗಾರಿಕೆ/ಶಿಕ್ಷಣ/ಕಲ್ಯಾಣ ಇಲಾಖೆಗಳಿಂದ ದೃಢೀಕರಿಸಿಕೊಳ್ಳತಕ್ಕದೆಂದಿದೆ.

ಉಲ್ಲೇಖ(4)ರ ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ: 02-06-2003ರ ಮಾರ್ಗಸೂಚಿಯನ್ವಯ ಬಿಬಿಎಂಪಿಗೆ ಸೇರಿದ ಜಮೀನುಗಳನ್ನು ವಿಲೇವಾರಿ ಮಾಡುವ ಸಂದರ್ಭಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮಾತ್ರವೇ ಪ್ರಕರಣಗಳನ್ನು ಇತ್ಯರ್ಥಪಡಿಸುವಂತೆ ಆದೇಶಿಸಿದೆ.

### I) ಉಚಿತ ಜಮೀನು ಮಂಜೂರಾತಿ.

ಅ) ಸರ್ಕಾರದಿಂದ ನಡೆಸಲಾಗುತ್ತಿರುವ ಶಾಲೆಗಳು/ಕಾಲೇಜುಗಳು/ಹಾಸ್ಟೆಲ್‌ಗಳು/ಅಂಗನವಾಡಿಗಳು/ ಸಾರ್ವಜನಿಕ ಲೈಬ್ರರಿಗಳು/ಸ್ತ್ರೀ ಸ್ವೀಕಾರ ಕೇಂದ್ರಗಳು (Destitute Homes) ಮತ್ತು ಪೋಲೀಸ್ ಠಾಣೆಗಳು.

ಆ) ಸ್ಮಶಾನಗಳು/ಚಿತಾಗಾರಗಳು/ಡಾಗ್ ಡಿಟೆಕ್ಷನ್ ಸೆಂಟರ್/ನೋಂದಾಯಿತ ಸಂಘಗಳಿಂದ/ ಧಾರ್ಮಿಕ ಸಂಸ್ಥೆಗಳಿಂದ/ ಖಾಸಗಿ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತಿರುವ ಸಾರ್ವಜನಿಕ ಶೌಚಾಲಯಗಳು.

## ii) ಮಾರುಕಟ್ಟೆ ದರದ ಶೇ 25ಕ್ಕೆ ಜಮೀನು ಮಂಜೂರಾತಿ

ಅ) ಕಂಡಿಕೆ i(ಅ) ನಲ್ಲಿ ತಿಳಿಸಿರುವ ಸರ್ಕಾರಿ ಇಲಾಖೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸರ್ಕಾರಿ ಇಲಾಖೆಗಳು

ಆ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಂದ ನಿರ್ವಹಿಸಲಾಗುತ್ತಿರುವ ನೋಂದಾಯಿತ ಸಂಘ ಸಂಸ್ಥೆಗಳು ಲಾಭವೂ–ನಷ್ಟವೂ ಇಲ್ಲದೆ ನಡೆಸುವ ಶಾಲೆಗಳು, ಕಾಲೇಜುಗಳು/ಹಾಸ್ಟೆಲ್‌ಗಳು/ ಅನಾಥಾಲಯಗಳು/ಸಮುದಾಯಭವನಗಳು.

## iii) ಮಾರುಕಟ್ಟೆ ದರದ ಶೇ 50ಕ್ಕೆ ಜಮೀನು ಮಂಜೂರಾತಿ

ಅ) ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಅಥವಾ ವರಮಾನ ತೆರಿಗೆ ಕಾಯ್ದೆ 1961ರ ಕಲಂ 12(ಎ) ಅಡಿ ನೋಂದಾಯಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡೇತರ ಧರ್ಮಸಂಸ್ಥೆ ನಡೆಸುತ್ತಿರುವ ಹಾಸ್ಟೆಲ್‌ಗಳು/ಶಾಲೆಗಳು/ಕಾಲೇಜುಗಳು/ಸ್ತ್ರೀ ಸ್ವೀಕಾರ ಕೇಂದ್ರಗಳು (Destitute Homes)/ ಅನಾಥಾಲಯಗಳು/ಅಂಗವಿಕಲರು ಮತ್ತು ಮಾನಸಿಕ ಅಸ್ವಸ್ಥ ನಿಲಯಗಳು/ವೃದ್ಧಾಶ್ರಮಗಳು/ಕ್ರೀಡಾ ಸಂಕೀರ್ಣಗಳು.

ಆ) ರೆಡ್‌ಕ್ರಾಸ್ ಸಂಸ್ಥೆ/ರೋಟರಿ ಕ್ಲಬ್‌ಗಳು/ಲಯನ್ಸ್ ಕ್ಲಬ್‌ಗಳು/ಪ್ರೆಸ್ ಕ್ಲಬ್‌ಗಳು.

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಮಂಡಳಿಗಳಿಗೆ/ಪಾಲಿಕೆಗಳಿಗೆ/ ಕಛೇರಿಗಳ/ಮಾರುಕಟ್ಟೆಗಳ/ಬಸ್ ನಿಲ್ದಾಣಗಳ/ ವಿದ್ಯುತ್ ಮಂಡಳಿಗಳ, ಮತ್ತಿತರ ಸಾರ್ವಜನಿಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ.

## iv) ಮಾರುಕಟ್ಟೆ ದರಕ್ಕೆ ಜಮೀನು ಮಂಜೂರಾತಿ

ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿಲ್ಲದ ಅಥವಾ ವರಮಾನ ತೆರಿಗೆ ಕಾಯ್ದೆ 1961ರ ಕಲಂ 12(ಎ) ಅಡಿ ನೋಂದಾಯಿಸಲ್ಪಡದಿರುವ ವ್ಯಕ್ತಿಗಳು/ಧಾರ್ಮಿಕೇತರ ಸಂಸ್ಥೆಗಳು ನಡೆಸುತ್ತಿರುವ ಆಸ್ಪತ್ರೆಗಳು/ಹಾಸ್ಟೆಲ್‌ಗಳು/ ಶಾಲಾಕಾಲೇಜುಗಳು/ಮನರಂಜನಾ ಕ್ಲಬ್‌ಗಳು.

ಮಾರುಕಟ್ಟೆ ದರ: ಉಪನೋಂದಣಾಧಿಕಾರಿಗಳಿಂದ ಪಡೆದ ಮಂಜೂರಾತಿ ವರ್ಷದ ಮಾರಾಟದ ಅಂಕಿ ಅಂಶಗಳ ಆಧಾರದ ಮೇಲೆ ನಿಗಧಿಪಡಿಸಿದ ದರ, ಅಥವಾ ಒಂದು ವೇಳೆ ಮಂಜೂರಾತಿ ವರ್ಷದಲ್ಲಿ ಆ ಪ್ರದೇಶದಲ್ಲಿ ಯಾವುದೇ ಮಾರಾಟವು ನಡೆಯದಿದ್ದಲ್ಲಿ ಹಿಂದಿನ ಮೂರು ವರ್ಷಗಳ ಮಾರಾಟದ ಸರಾಸರಿಯನ್ನು ತೆಗೆದುಕೊಂಡು ನಿಗದಿಪಡಿಸಿದ ಜಮೀನಿನ ಮಾರುಕಟ್ಟೆ ದರ.

## v) ಸಾರ್ವಜನಿಕ ಹರಾಜು

ಇನ್ನುಳಿದ ಎಲ್ಲಾ ಪ್ರಕರಣಗಳಲ್ಲೂ, ಜಮೀನುಗಳನ್ನು ಸಾರ್ವಜನಿಕ ಹರಾಜು ಮೂಲಕವೇ ಮಾರಾಟ ಮಾಡುವುದು.

## vi) ಸ್ವತ್ತುಗಳ ಗುತ್ತಿಗೆ

ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು.

ಮೇಲ್ಕಾಣಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದ್ದಲ್ಲ.

ಮುಂದುವರೆದು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪಿರ್ಸವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ-1985 ರನ್ವಯ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳನ್ನು ಸರ್ಕಾರದ ಅಧಿಸೂಚನೆಗಳಲ್ಲಿ ವಿವಿಧ ದಿನಾಂಕಗಳಂದು ಪ್ರಕಟಗೊಂಡಿದ್ದು, ಸರ್ಕಾರದ ಅಧಿಸೂಚನೆಗಳಲ್ಲಿ ಪ್ರಕಟಗೊಂಡಿರುವ ಪ್ರದೇಶಗಳನ್ನು ನಿರ್ದಿಷ್ಟ ಉದ್ದೇಶಕ್ಕೆ ಹೊರತುಪಡಿಸಿ ಇತರೆ ಉಪಯೋಗದ ಉದ್ದೇಶಕ್ಕೆ ಪ್ರತಿಬಂಧಿಸಲಾಗಿದೆ. ಹಾಗೂ ಕಲಂ 8(2)ರ ಅನುಸಾರ ಬೇರೆ ಉದ್ದೇಶಕ್ಕೆ ಪರಬಾರೆ ಕ್ರಯ, ಗುತ್ತಿಗೆ ಅಥವಾ ಪರವಾನಿಗೆ ನೀಡುವುದು ಅನೂರ್ಜಿತ ಮತ್ತು ಪರಿಣಾಮ ಶೂನ್ಯ (Null and viod) ಎಂದು ಸ್ಪಷ್ಟಪಡಿಸಲಾಗಿದೆ. ಅದೇ ನಿಯಮದ ಕಲಂ 6 ಮತ್ತು 8ನ್ನು ಉಲ್ಲಂಘಿಸಿದವರಿಗೆ 6 ತಿಂಗಳವರೆಗಿನ ಶಿಕ್ಷೆ ಅಥವಾ ದಂಡನೆ ಅಥವಾ ಎರಡನ್ನು ವಿಧಿಸುವುದಕ್ಕೆ ಕಲಂ-11 ರಲ್ಲಿ ನಿರ್ದಿಷ್ಟಪಡಿಸಿದೆ.

ಆದಾಗ್ಯೂ, ಗುತ್ತಿಗೆಗೆ ನೀಡುವ ಬಗೆಗಿನ ಪ್ರಸ್ತಾವನೆಗಳನ್ನು ಉಲ್ಲೇಖಿತ ಮಾರ್ಗಸೂಚಿಗಳನ್ವಯ ಕ್ರಮಕೈಗೊಳ್ಳದೇ ಪಾದಚಾರಿ ರಸ್ತೆ, ಸರ್ಕಾರದ ಅಧಿಸೂಚನೆಗಳಲ್ಲಿ ಪ್ರಕಟಗೊಂಡಿರುವ ಆಟದ ಮೈದಾನ, ಉದ್ಯಾನವನ ಮತ್ತು ತೆರೆದ ಪ್ರದೇಶಗಳಲ್ಲೂ ಸಹ ಗುತ್ತಿಗೆಗೆ ನೀಡಲು ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದೆ. ಆದುದರಿಂದ, ಇಂತಹ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸದೇ ಈಗಾಗಲೇ ಚಾಲ್ತಿಯಲ್ಲಿರುವ ಮಾರ್ಗಸೂಚಿ ಹಾಗೂ ಸುತ್ತೋಲೆಗಳನ್ವಯ ಆಯಾ ವಲಯದ ಅಪರ/ಜಂಟಿ ಆಯುಕ್ತರ ಮಟ್ಟದಲ್ಲಿಯೇ ತಿರಸ್ಕರಿಸಿ ಅರ್ಜಿದಾರರಿಗೆ ಹಿಂಬರಹ ನೀಡಲು ಕ್ರಮ ಕೈಗೊಳ್ಳಲು ಸೂಚಿಸಿದೆ.

ಪಾದಚಾರಿ ರಸ್ತೆ, ಆಟದ ಮೈದಾನ, ಉದ್ಯಾನವನ ಹಾಗೂ ತೆರೆದ ಪ್ರದೇಶಗಳನ್ನು ಹೊರತುಪಡಿಸಿ, ಇನ್ನಿತರೇ ಪಾಲಿಕೆಯ ಆಸ್ತಿಗಳಲ್ಲಿ ನಗರ ಪಾಲಿಕೆಯ ಯಾವುದೇ ಉದ್ದೇಶಕ್ಕೆ ಅಗತ್ಯವಿಲ್ಲವೆಂಬುದಕ್ಕೆ ಕಾಮಗಾರಿ, ಆರೋಗ್ಯ, ತೋಟಗಾರಿಕೆ, ಶಿಕ್ಷಣ ಮತ್ತು ಕಲ್ಯಾಣ ಇಲಾಖೆಗಳಿಂದ ದೃಢೀಕರಿಸಿ ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ:02-06-2003ರ ಸುತ್ತೋಲೆ ಕ್ರಮ ಸಂಖ್ಯೆ: V ಮತ್ತು VI ರನ್ವಯ ಸ್ವತ್ತುಗಳನ್ನು ಸಾರ್ವಜನಿಕ ಹರಾಜು ಮೂಲಕ ಗುತ್ತಿಗೆಗೆ/ಕ್ರಯಕ್ಕೆ ನೀಡಲು ಸ್ಪಷ್ಟ ಅಭಿಪ್ರಾಯದ ವರದಿಯೊಂದಿಗೆ ಪ್ರಸ್ತಾವನೆಗಳನ್ನು ಆಯಾ ವಲಯದ ಅಪರ/ಜಂಟಿ ಆಯುಕ್ತರ ಮುಖೇನ ಆಸ್ತಿ ಶಾಖೆಗೆ ಕಡತ ಸಲ್ಲಿಸಲು ಸೂಚಿಸಿದೆ.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ಸಲ್ಲಿಸಿದೆ.
2. ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಿದೆ.
3. ವಲಯ ಅಪರ/ಜಂಟಿ ಆಯುಕ್ತರು/ ಉಪ ಆಯುಕ್ತರು (ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ ಆರ್.ಆರ್.ನಗರ/ದಾಸರಹಳ್ಳಿ/ಯಲಹಂಕ/ಬೊಮ್ಮನಹಳ್ಳಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
4. ಅಪರ ಆಯುಕ್ತರು ಆರೋಗ್ಯ ಮತ್ತು ಘನ ತ್ಯಾಜ್ಯ ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
5. ಜಂಟಿ ಆಯುಕ್ತರು (ಕಲ್ಯಾಣ), ಉಪ ಆಯುಕ್ತರು (ಕಲ್ಯಾಣ), ಉಪ ಆಯುಕ್ತರು (ಕಂದಾಯ) ವಿದ್ಯಾಧಿಕಾರಿ ಬಿಬಿಎಂಪಿ ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ವಲಯ ಮುಖ್ಯ ಅಭಿಯಂತರರು (ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಆರ್.ಆರ್.ನಗರ/ ದಾಸರಹಳ್ಳಿ/ ಯಲಹಂಕ/ಬೊಮ್ಮನಹಳ್ಳಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7. ಎಲ್ಲಾ ವಲಯದ ಆರೋಗ್ಯಾಧಿಕಾರಿ/ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ ಮಹದೇವಪುರ/ಆರ್.ಆರ್.ನಗರ/ದಾಸರಹಳ್ಳಿ/ಯಲಹಂಕ/ಬೊಮ್ಮನಹಳ್ಳಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಎಲ್ಲಾ ಸ್ಥಾಯಿ ಸಮಿತಿಗಳ ಅವಗಾಹನೆಗೆ ತರಲು ಕೋರಿದೆ.
9. ಕಛೇರಿ ಕಡತಕ್ಕೆ.